# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\6255\2014\ಸನಿಕಾಸ-1

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:15/06/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ದೂರುದಾರರಾದ ಶ್ರೀ.ಸೈಯದ್ ಇಲಿಯಾಜ್ ಬಿನ್ ಸೈಯದ್ ಯೂಸುಫ್, ಮನೆ ನಂ.352, ಪಿಹೆಚ್ ಕಾಲೋನಿ, 1ನೇ ಕ್ರಾಸ್, ಬೇಗಂ ಮೊಹಲ್ಲಾ, ಶಿರಾ ಪಟ್ಟಣ, ತುಮಕೂರು ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

*******

ತುಮಕೂರು ಜಿಲ್ಲೆ ಶಿರಾ ಪಟ್ಟಣದ ಬೇಗಂ ಮೊಹಲ್ಲಾ 1ನೇ ಕ್ರಾಸ್‌ನ ಪಿಹೆಚ್ ಕಾಲೋನಿಯ ಮನೆ ನಂ.352ರ ನಿವಾಸಿಯಾದ ಶ್ರೀ.ಸೈಯದ್ ಇಲಿಯಾಸ್ ಬಿನ್ ಸೈಯದ್ ಯೂಸುಫ್ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ತುಮಕೂರು ಜಿಲ್ಲೆ ಶಿರಾ ಪಟ್ಟಣ ನಗರಸಭೆಯ ಪೌರಾಯುಕ್ತರಾದ ಶ್ರೀ.ಈರಾ ನಾಯ್ಕ, 2) ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಶ್ರೀ.ಮಂಜುನಾಥ ರಾವ್, 3) ನೋಡಲ್ ಅಭಿಯಂತರರಾದ ಶ್ರೀ.ಪ್ರಕಾಶ್ ಸಿಂಗ್ ಮತ್ತು ಕಿರಿಯ ಅಭಿಯಂತರರಾದ ಶ್ರೀ.ಡಿ.ಮಂಜುನಾಥ (ಇನ್ನು ಮುಂದೆ "1 ರಿಂದ 4ನೇ ಎದುರುದಾರ" ಎಂದು ಕ್ರಮವಾಗಿ, ಕರೆಯಲ್ಪಡುತ್ತಾರೆ) ರವರ ವಿರುದ್ಧ ಅವ್ಯವಹಾರದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ತುಮಕೂರು ಜಿಲ್ಲೆ ಶಿರಾ ಪಟ್ಟಣ ನಗರಸಭೆ ವ್ಯಾಪ್ತಿಯ ವಾರ್ಡ್ ನಂ.19 ಹಳೆ ನಂ.15ರ ಪಿಹೆಚ್ ಕಾಲೋನಿ 1ನೇ ತಿರುವಿನ ನಾಗರೀಕರುಗಳು ಶಿರಾ ನಗರಸಭೆಗೆ ರಸ್ತೆ ಮತ್ತು ಒಳಚರಂಡಿಗೆ ಸೇರಿದಂತೆ ನಾಗರೀಕ ಸೌಲಭ್ಯಗಳನ್ನು ಕಲ್ಪಿಸಿಕೊಡುವಂತೆ ಎದುರುದಾರರಿಗೆ ಮನವಿ ಸಲ್ಲಿಸಿದರೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲ. ವಾರ್ಡ್ ನಂ.19ರ ನಗರಸಭೆ ಸದಸ್ಯರ ಸಂಬಂಧಿಗಳು ನಗರಸಭೆ ವ್ಯಾಪ್ತಿಯ ರಸ್ತೆ ಒತ್ತುವರಿ ಮಾಡಿದ್ದು, ಅದನ್ನು ತೆರವುಗೊಳಿಸುವಂತೆ ಹಾಗೂ ನಾಗರೀಕ ಸೌಲಭ್ಯ ಕಲ್ಪಿಸಿಕೊಡುವಂತೆ ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ತುಮಕೂರು ರವರು ಆದೇಶಿಸಿದ್ದರೂ ಸಹ ಯಾವುದೇ ಕ್ರಮ

ಕೈಗೊಂಡಿಲ್ಲ ಹಾಗೂ ಸದರಿ ರಸ್ತೆ ಒತ್ತುವರಿ ಮಾಡಿಕೊಂಡಿರುವವರು ತಮ್ಮ ವಿರುದ್ಧ 2 ಸುಳ್ಳು ದೂರುಗಳನ್ನು ದಾಖಲಿಸಿ, ಒತ್ತಾಯಪೂರ್ವಕವಾಗಿ ತಮ್ಮ ನಿವೇಶನದಲ್ಲಿ ಚರಂಡಿ ನಿರ್ಮಿಸಲು ಪ್ರಯತ್ನಿಸಿರುವುದಾಗಿ ದೂರುದಾರರು ಹೇಳಿದ್ದಾರೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1 ರಿಂದ 4ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ನಿವೇಶನ ರಹಿತ ಫಲಾನುಭವಿಗಳಿಗೆ ಖಾಯಂ ಮನೆ ನಿರ್ಮಿಸಿಕೊಡುವ ಸಂಬಂಧ ಸರ್ಕಾರದ ನಿರ್ದೇಶನದಂತೆ ಅರ್ಜಿಗಳನ್ನು ಆಹ್ವಾನಿಸಿದ್ದು, ಅದರಂತೆ ನಿರ್ಗತಿಕರಿಗೆ ಪಿಹೆಚ್ ಕಾಲೋನಿಯಲ್ಲಿ ಆಶ್ರಯ ಯೋಜನೆಯಡಿ 1993 ರಂದು ಒಟ್ಟು 144 ನಿವೇಶನಗಳನ್ನು ಹಂಚಿಕೆ ಮಾಡಲಾಗಿತ್ತು, ಅದರಂತೆ ಫಲಾನುಭವಿಗಳಿಗೆ ನಿವೇಶನದಲ್ಲಿ ಮನೆ ನಿರ್ಮಿಸಲು ಅನುಮತಿಯನ್ನು ಸಹ ನೀಡಲಾಗಿದೆ. ಆಶ್ರಯ ಯೋಜನೆಯಡಿ 4 ಕ್ರಾಸ್‌ಗಳಲ್ಲಿ 2ನೇ ಕ್ರಾಸ್‌ನಿಂದ 4ನೇ ಕ್ರಾಸ್‌ನವರೆಗೆ ಮನೆ ನಿರ್ಮಿಸಿದ್ದು, ಮೂಲ ಸೌಕರ್ಯವನ್ನು ಒದಗಿಸಲಾಗಿದೆ. 1ನೇ ಕ್ರಾಸ್‌ನಲ್ಲಿ ಬರುವ ಆಶ್ರಯ ಮನೆ ಸಂ:115 ರಿಂದ 129 ರವರೆಗೆ ಕೆಲವರು ಮನೆಗಳನ್ನು ನಿರ್ಮಾಣ ಮಾಡಿಕೊಂಡು ಕೆಲವು ವ್ಯಕ್ತಿಗಳು ನಿವೇಶನಗಳನ್ನು ಸುಸ್ಥಿತಿಯಲ್ಲಿಟ್ಟುಕೊಂಡಿದ್ದಾರೆ. ಆದರೆ, ಆಶ್ರಯ ಮನೆ ಸಂ:130 ರಿಂದ 133 ರವರೆಗಿನ ಫಲಾನುಭವಿಗಳು ಯಾರೆಂಬುದು ತಿಳಿದಿಲ್ಲ. ಸದರಿ ನಿವೇಶನಗಳಲ್ಲಿ ಗಿಡಗಂಟಿಗಳು ಬೆಳೆದು ನಿಂತಿವೆ. ಅಲ್ಲದೇ, ಆ ನಿವೇಶನಗಳಿಗೆ ಹೊಂದಿಕೊಂಡಂತಿರುವ ಕೆಲವು ವ್ಯಕ್ತಿಗಳು ಸುಮಾರು 10 ರಿಂದ 13 ವರ್ಷಗಳಿಂದ ಒತ್ತುವರಿ ಮಾಡಿ ಮನೆ ನಿರ್ಮಿಸಿದ್ದಾರೆ. ಕ್ರಮ ಸಂ:128 ರಿಂದ 133ರವರೆಗಿನ ಫಲಾನುಭವಿಗಳ ನಿರ್ಲಕ್ಷ್ಯತನದಿಂದಾಗಿ ರಸ್ತೆ ಹಾಗೂ ಅವರುಗಳ ನಿವೇಶನವು ಒತ್ತುವರಿಯಾಗಿ ಸುಮಾರು 13 ವರ್ಷಗಳಾಗಿವೆ. ಪ್ರಸ್ತುತವಾಗಿ ಸರ್ಕಾರದಿಂದ ಅನುದಾನ ಬಿಡುಗಡೆಯಾಗಿದ್ದು, ಸಿಸಿ ಚರಂಡಿ ನಿರ್ಮಾಣ ಮಾಡಿ, ಚರಂಡಿ ನೀರು ಸರಾಗವಾಗಿ ಹೋಗುವಂತೆ ನಿರ್ಮಿಸಲಾಗಿದೆ. ಸದರಿ ಕಾಲೋನಿಯ ಸರ್ವೆ ನಂ.6ರ ಜಾಗ ತಕರಾರಿನ ಜಾಗವಾಗಿದ್ದು, ಸರ್ಕಾರದ ಮಟ್ಟದಲ್ಲಿ ಇತ್ಯರ್ಥವಾಗಬೇಕಾಗಿದೆ. ಕ್ರಮ ಸಂ:130 ರಿಂದ 133ರವರೆಗಿನ ಫಲಾನುಭವಿಗಳು ಮನೆಗಳನ್ನು ಉಪಯೋಗಿಸದೇ ಇರುವುದರಿಂದ, ಸದರಿಯವರಿಗೆ ಅವಶ್ಯಕತೆಯಿಲ್ಲವೆಂದು ತಿಳಿದು ಬಂದಿದೆ ಹಾಗೂ ಇದು ಸರ್ಕಾರದ ಜಾಗವಾಗಿರುವುದರಿಂದ ಸಾರ್ವಜನಿಕ ಹಿತದೃಷ್ಟಿಯಿಂದ ಒಳಚರಂಡಿ ಮಾಡಲು ಕ್ರಮ ಕೈಗೊಳ್ಳಲಾಗಿದೆಯೆಂದು ಹೇಳಿದ್ದಾರೆ.

4. ಎದುರುದಾರರ ಆಕ್ಷೇಪಣೆಗಳಿಗೆ ಪ್ರತ್ಯುತ್ತರವನ್ನು ಸಲ್ಲಿಸುವಂತೆ ದೂರುದಾರರನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ, ಆಕ್ಷೇಪಣೆಯ ಅಂಶಗಳನ್ನು ಅಲ್ಲಗಳೆದಿದ್ದಾರೆ.

S/d

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಶಿರಾ ಪಟ್ಟಣದ ನಗರಸಭೆ ವ್ಯಾಪ್ತಿಗೆ ಸಂಬಂಧಪಟ್ಟ ಸ್ವಂತ ಮನೆಯಿಲ್ಲದ ವ್ಯಕ್ತಿಗಳಿಗೆ ಖಾಯಂ ಮನೆ ನಿರ್ಮಿಸಿಕೊಳ್ಳುವ ಸಂಬಂಧ ಪಿಹೆಚ್ ಕಾಲೋನಿಯಲ್ಲಿ 1993ನೇ ಸಾಲಿನಲ್ಲಿ ಒಟ್ಟು 144 ನಿವೇಶನಗಳನ್ನು ಮಂಜೂರು ಮಾಡಿ, ಮನೆ ನಿರ್ಮಿಸಲು ಅನುಮತಿ ನೀಡಲಾಗಿದೆ. ಸದರಿ ಕಾಲೋನಿಯ 1ನೇ ಕ್ರಾಸ್‌ನಲ್ಲಿ ಈಗಾಗಲೇ ಮನೆ ನಿರ್ಮಿಸಿಕೊಂಡು ಫಲಾನುಭವಿಗಳು ವಾಸವಾಗಿದ್ದಾರೆ. ಆದರೆ, ಆಶ್ರಯ ಮನೆ ಸಂ:130 ರಿಂದ 133ರವರೆಗಿನ ಫಲಾನುಭವಿಗಳು ಮನೆ ನಿರ್ಮಿಸದೇ ಯಾರು ವಾಸವಾಗಿದ್ದಾರೆಂಬುದು ಸಹ ತಿಳಿದಿಲ್ಲವೆಂದು ಎದುರುದಾರರು ಹೇಳಿದ್ದಾರೆ, ಅಲ್ಲದೇ ನಿವೇಶನ ಸಂ:128 ರಿಂದ 133ರವರೆಗಿನ ಫಲಾನುಭವಿಗಳ ನಿರ್ಲಕ್ಷ್ಯತನದಿಂದ ರಸ್ತೆ ಹಾಗೂ ಅವರುಗಳ ನಿವೇಶನವು ಒತ್ತುವರಿಯಾಗಿದ್ದು, ಆ ಪ್ರದೇಶದಲ್ಲಿ ಸರ್ಕಾರದ ಅನುದಾನ ಪಡೆದು ಚರಂಡಿ ಕಾರ್ಯ ನಿರ್ಮಿಸಲಾಗಿದೆ. ಮನೆ ಸಂ: 130 ರಿಂದ 133ರವರೆಗಿನ ಫಲಾನುಭವಿಗಳು ಸದರಿ ನಿವೇಶನಗಳನ್ನು ಉಪಯೋಗಿಸದೇ ಇರುವ ಕಾರಣ, ಸದರಿ ಸ್ಥಳ ಸರ್ಕಾರದ ಜಾಗವಾಗಿದ್ದು, ಅದನ್ನು ಚರಂಡಿ ನಿರ್ಮಿಸಲು ಉಪಯೋಗಿಸಿರುವುದು ಕಂಡು ಬಂದಿದೆ. ಯಾವುದೇ ನಿವೇಶನ ಸರ್ಕಾರದಿಂದ ಫಲಾನುಭವಿಗಳಿಗೆ ಮಂಜೂರಾದ ನಂತರ ಅವುಗಳ ಬಗ್ಗೆ ಪರಿಶೀಲನೆ ಮಾಡಿ, ಫಲಾನುಭವಿಗಳು ಆ ಸ್ಥಳದಲ್ಲಿ ವಾಸವಾಗಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ಖಚಿತಪಡಿಸಿಕೊಂಡು ಒಂದು ವೇಳೆ ವಾಸವಿಲ್ಲದಿದ್ದ ಪಕ್ಷದಲ್ಲಿ ನೋಟೀಸ್ ನೀಡಿ, ಸದರಿ ನಿವೇಶನಗಳನ್ನು ಸರ್ಕಾಗದ ವಶಕ್ಕೆ ಪಡೆದು ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ಇತರೆ ಉದ್ದೇಶಕ್ಕಾಗಿ ಉಪಯೋಗಿಸುವುದು ಎದುರುದಾರರ ಕರ್ತವ್ಯವಾಗಿದೆ. ಆದರೆ, ಎದುರುದಾರರು ಸದರಿ ನಿವೇಶನ ಸಂ. 130 ರಿಂದ 133ರವರೆಗಿನ ಫಲಾನುಭವಿಗಳಿಗೆ ನೋಟೀಸ್ ನೀಡಿ, ಸರ್ಕಾರದ ವಶಕ್ಕೆ ಪಡೆದು ಒಳಚರಂಡಿ ನಿರ್ಮಿಸುವ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ, ಬದಲಾಗಿ ನೇರವಾಗಿ ಸದರಿ ನಿವೇಶನಗಳಲ್ಲಿ ಒಳಚರಂಡಿ ನಿರ್ಮಿಸಲು ಪ್ರಯತ್ನಿಸಿರುವುದು ಕಂಡು ಬಂದಿದೆ. ನಿವೇಶನ ಸಂ:128 ರಿಂದ 133ರವರೆಗಿನ ಫಲಾನುಭವಿಗಳ ನಿರ್ಲಕ್ಷ್ಯತನದಿಂದಾಗಿ ಅವರುಗಳ ನಿವೇಶನಗಳು ಒತ್ತುವರಿಯಾಗಿದೆಯೆಂದು ಎದುರುದಾರರು ಹೇಳಿದ್ದಾರೆ. ಆದರೆ, ಸದರಿ ನಿವೇಶನಗಳ ಒತ್ತುವರಿಗೆ ಸಂಬಂಧಪಟ್ಟಂತೆ ತೆರವುಗೊಳಿಸಲು ಸೂಕ್ತ ಕ್ರಮ ಕೈಗೊಂಡು ಸದರಿ ಒತ್ತುವರಿ ನಿವೇಶನಗಳನ್ನು ಸರ್ಕಾರದ ವಶಕ್ಕೆ ಪಡೆಯುವುದು ಎದುರುದಾರರ ಕರ್ತವ್ಯವಾಗಿದೆ. ಆದರೆ, ಎದುರುದಾರರು ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಎದುರುದಾರರು ಸದರಿ ನಿವೇಶನಗಳಲ್ಲಿ ಒಳಚರಂಡಿ ನಿರ್ಮಿಸುವ ಸಂದರ್ಭದಲ್ಲಿ ಸದರಿ ನಿವೇಶನಗಳ ಮಂಜೂರಾತಿಯನ್ನು ರದ್ದುಪಡಿಸಿ, ಸರ್ಕಾರದ ವಶಕ್ಕೆ ಪಡೆದು ಸಕ್ಷಮ

Sd/-

ಪ್ರಾಧಿಕಾರದಿಂದ ಅನುಮತಿ ಪಡೆದು ಒಳಚರಂಡಿ ನಿರ್ಮಿಸುವುದು ಮತ್ತು ಸದರಿ ನಿವೇಶನಗಳಲ್ಲಿ ಒತ್ತುವರಿದಾರರನ್ನು ತೆರವುಗೊಳಿಸಿ, ಸರ್ಕಾರದ ವಶಕ್ಕೆ ಪಡೆಯುವ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೇ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

6. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ 1, 2 ಮತ್ತು 4ನೇ ಎದುರುದಾರರುಗಳ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ಇಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

7. ಆದ್ದರಿಂದ, ಸದರಿ ನಿವೇಶನಗಳಲ್ಲಿ ಒತ್ತುವರಿದಾರರನ್ನು ತೆರವುಗೊಳಿಸಿ, ಸರ್ಕಾರದ ವಶಕ್ಕೆ ಪಡೆಯುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

8. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- 15/6/17.

(ನ್ಯಾಯಮೂರ್ತಿ ಸುಬಾಷ್ ಬಿ ಅಡಿ)
ಉಪಲೋಕಾಯುಕ್ತ-2,
ಕರ್ನಾಟಕ ರಾಜ್ಯ.